ಗೆ:

**ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,**
**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ,**
**ಕೇಂದ್ರ ಕಛೇರಿ, ಶಾಂತಿನಗರ,**
**ಬೆಂಗಳೂರು–560 027.**

ಗೌರಾನ್ವಿತರೇ,

**ವಿಷಯ:– ಸಂಸ್ಥೆಯ ಸಿಬ್ಬಂದಿಗಳ/ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಕುರಿತು.**

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಆದ್ಯ ಗಮನಕ್ಕೆ ತರಬಯಸುವುದೇನೆಂದರೆ, ಈ ಹಿಂದಿನಿಂದಲೂ ಸ್ವಾತಂತ್ರ್ಯೋತ್ಸವದ ದಿನಾಚರಣೆಗೆ/ಕನ್ನಡ ರಾಜ್ಯೋತ್ಸವದ ದಿನಂದು ಸಂಸ್ಥೆಯ **ಸಿಬ್ಬಂದಿಗಳ/ನೌಕರರ** ಮಕ್ಕಳಿಗೆ 10ನೇ ತರಗತಿಯಿಂದ ಪದವೀದರ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸಂಸ್ಥೆಯು ಪ್ರತಿಭಾ ಪುರಸ್ಕಾರ ನೀಡುತ್ತಿದ್ದುದು ಸರಿಯಷ್ಟೆ. ಆದರೆ ಇತ್ತೀಚೆಗೆ ಸಂಸ್ಥೆಯು **ಸಿಬ್ಬಂದಿಗಳ/ನೌಕರರ** ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವುದನ್ನು ನಿಲ್ಲಿಸಿದೆ.

ಈ ಹಿಂದೆ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶ್ರೀ ಉಪೇಂದ್ರ ತ್ರಿಪಾಠಿಯವರ ಕಾಲದಿಂದ **ಸಿಬ್ಬಂದಿಗಳ/ನೌಕರರ** ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು ಹಾಗು ಕನ್ನಡದ ಸಾಹಿತಿಗಳಿಗೆ ಸಂಸ್ಥೆಯ ವತಿಯಿಂದ **"ನೃಪತುಂತ"** ಪ್ರಶಸ್ತಿ ನೀಡುವ ಸಲುವಾಗಿ 2 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಸದರಿ ಹಣವನ್ನು ಬ್ಯಾಂಕ್‌ನಲ್ಲಿ ಖಾಯಂ ಠೇವಣಿಯಾಗಿ ಇಡಲಾಗಿತ್ತು. ಅದರಿಂದ ಬಂದ ಬಡ್ಡಿಯ ಹಣದಿಂದ ನೃಪತುಂಗ ಪ್ರಶಸ್ತಿ ಪುರಸ್ಕೃತರಿಗೆ ಗೌರವಿಸಲಾಗುತ್ತಿತ್ತು.

ಆದರೆ ಇತ್ತೀಚಿನ ವರ್ಷಗಳಲ್ಲಿ ಸಂಸ್ಥೆಯ **ಸಿಬ್ಬಂದಿಗಳ/ನೌಕರರ** ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವುದನ್ನು ನಿಲ್ಲಿಸಲಾಗಿದೆ. ಸಂಸ್ಥೆಯು ತನ್ನ ಸಿಬ್ಬಂದಿಗಳ/ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ನೀಡದಷ್ಟು ಬಡವಾಗಿಲ್ಲ, ಸಂಸ್ಥೆಯು ಬೆಂಗಳೂರು ನಗರದ ಸುತ್ತಮುತ್ತ

ಸಾವಿರಾರು ಎಕರೆ ಭೂಮಿ, ಕಟ್ಟಡಗಳು, ಡಿಪೋಗಳು, ಕಛೇರಿಗಳನ್ನು ಹೊಂದಿದೆ, ಸಂಸ್ಥೆಗೆ ಮಾಹೆಯಾನ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತಿದೆ.

ಆದುದರಿಂದ ಸಂಸ್ಥೆಯ ಅತ್ಯುನ್ನತ ಹುದ್ದೆಯಲ್ಲಿರುವ ತಾವು **ಸಿಬ್ಬಂದಿಗಳ/ನೌಕರರ** ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವುದನ್ನು ಮತ್ತೆ ನವೆಂಬರ್–2025ರಿಂದ ಪುನಾರಂರಭಿಸಿ ಸಂಸ್ಥೆಯ **ಸಿಬ್ಬಂದಿಗಳ/ನೌಕರರ** ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಶ್ರಮವಹಿಸಿ ದುಡಿಯುತ್ತಿರುವ ಸಂಸ್ಥೆಯ ಸಿಬ್ಬಂದಿಗಳ/ನೌಕರರ ಕುಟುಂಬಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಗೌರವಿಸಬೇಕೆಂದು ತಮ್ಮನ್ನು ವಿನಮ್ರತೆಯಿಂದ ಕೋರುತ್ತೇನೆ.

**<u>ಘಟಕಗಳಲ್ಲಿರುವ ಇಟಿಎಂ ಯಂತ್ರಗಳ ಬಗ್ಗೆ:</u>**

ಬಹುತೇಕ ಘಟಕಗಳಲ್ಲಿ ಸಂಸ್ಥೆಯ ಇಟಿಎಂ ಯಂತ್ರಗಳು ಸರಿಯಾಗಿ ಕೆಲಸ ಮಾಡದೆ ಮಾರ್ಗ ಮಧ್ಯೆ ಕೆಟ್ಟು ಹೋಗುತ್ತಿದ್ದು, ಇದರಿಂದಾಗಿ ಸಾರ್ವಜನಿಕ ಪ್ರಯಾಣಿಕರಿಗೆ ನಿರೀಕ್ಷೆಯ ಮಟ್ಟದಲ್ಲಿ ಸೇವೆ ದೊರೆಯುತ್ತಿಲ್ಲ ಹಾಗೂ ಸಂಸ್ಥೆಯ ದೈನಂದಿನ ಸಾರಿಗೆ ಆದಾಯ ಗಣನೀಯವಾಗಿ ಇಳಿಕೆಯಾಗಲು ಕಾರಣವಾಗಿದೆ. ಇಟಿಎಂ ಯಂತ್ರಗಳನ್ನು ಬದಲಾಯಿ ಸಿಕೊಳ್ಳಲು/ಬ್ಯಾಟರಿ ಬದಲಾಯಿಸಿಕೊಳ್ಳಲು ನಿರ್ವಾಹಕರು ಸುತ್ತುಗಳನ್ನು ಮೊಟಕುಗೊಳಿಸಿ ಘಟಕಕ್ಕೆ ಬರುತ್ತಿರುವುದರಿಂದ ಸುತ್ತುಗಳು ರದ್ದಾಗುವುದಲ್ಲದೆ ಸಾರಿಗೆ ಆದಾಯ ಸಹ ಕುಂಠಿತವಾಗುತ್ತಿದೆ.

ಆದುದರಿಂದ ದಯಮಾಡಿ ತಾವು ಗುಣ ಮಟ್ಟದ ಇಟಿಎಂ ಯಂತ್ರಗಳನ್ನು ಸಂಸ್ಥೆಗೆ ಖರೀದಿ ಮಾಡಿ ನಿರ್ವಾಹಕರಿಗೆ ಆಗುತ್ತಿರುವ ತೊಂದರೆ, ಪ್ರಯಾಣಿಕರಿಗೆ ಸೇವೆಯಲ್ಲಿ ವ್ಯತ್ಯಯ ಸಂಸ್ಥೆಯ ಸಾರಿಗೆ ಆದಾಯಕ್ಕೆ ಧಕ್ಕೆ ಉಂಟಾಗುತ್ತಿರುವುದನ್ನು ತಡೆಯಬೇಕೆಂದು ತಮ್ಮನ್ನು ಕೋರುತ್ತೇನೆ.

ವಂದನೊಗಳೊಂದಿಗೆ,

ತಮ್ಮ ವಿಧೇಯ ಸಿಬ್ಬಂದಿ,
ಸಹಿ/–
(ಎನ್.ಶ್ರೀನಿವಾಸ)
ಸಂಚಾರ ನಿಯಂತ್ರಕ
ಘಟಕ–22, ವಾಯುವ್ಯ ವಲಯ,
ಬೆಂ.ಮ.ಸಾ.ಸಂಸ್ಥೆ,